955(186) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಹತ್ತಿರ ವಿಜ್ಞಾನ ನಗರ ಹಾಗೂ ಬಾಹ್ಯಾಕಾಶ ಮ್ಯೂಜಿಯಂ ನಿರ್ಮಿಸಲು ಸರ್ಕಾರ ಜಮೀನು ಮಂಜೂರು ಮಾಡಿ ಎಲ್ಲಾ ಪ್ರಕ್ರಿಯೆ ಪ್ರಾರಂಭಿಸಿರುವುದು ನಿಜವಲ್ಲವೇ ;

ಆ) ಸದರಿ ಕೆಲಸಕ್ಕಾಗಿ ಸರ್ಕಾರ ಮೀಸಲಾಗಿಟ್ಟ ಹಣ ಎಷ್ಟು ಹಾಗೂ ಇಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು ;

ಇ) ಈ ಉದ್ದೇಶಿತ ಬೆಂಗಳೂರು ವಿಜ್ಞಾನ ನಗರದ ಅಂದಾಜು ವೆಚ್ಚವೆಷ್ಟು ಹಾಗೂ ಕೇಂದ್ರ ರಾಜ್ಯ ಹಾಗೂ ಖಾಸಗಿ ಬಂಡವಾಳದ ಶೇಕಡಾ ಪ್ರಮಾಣವೆಷ್ಟು ;

ಈ) ಸದರಿ ಉದ್ದೇಶಿತ ವಿಜ್ಞಾನ ನಗರ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ಹಣಕಾಸಿನ ನೆರವು ನೀಡಲು ಸಿದ್ಧವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಈ ವಿಜ್ಞಾನ ನಗರ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು;

ಊ) ಹಣಕಾಸಿನ ನೆರವಿಗಾಗಿ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ ಹೇಗೆ; ಅಥವಾ ಇದಕ್ಕಾಗಿ ಪ್ರತ್ಯೇಕ ಸೊಸೈಟಿ ರಚಿಸಲಾಗಿದೆಯೇ ?

ಶ್ರೀ ಬಸವರಾಜ್.ಎಸ್. ಹೊರಟ್ಟಿ(ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು) ;

ಅ) ಸರ್ಕಾರವು 2002ರಲ್ಲಿ ಬನ್ನೇರುಘಟ್ಟ ಹತ್ತಿರ ಜಮೀನು ಮಂಜೂರು ಮಾಡಿದ್ದರೂ ಈ ಜಾಗದಲ್ಲಿ ಸಿಆರ್‌ಪಿಎಫ್(ಕೇಂದ್ರ ಮೀಸಲು ಪಡೆ) ನವರು ಅವರ ಕೇಂದ್ರವನ್ನು ಸ್ಥಾಪಿಸಿದ ಕಾರಣ ಆ ಜಮೀನನ್ನು ಭೌತಿಕವಾಗಿ ಈ ಇಲಾಖೆಗೆ ಸ್ವಾಧೀನತೆ ನೀಡಲಾಗಿಲ್ಲವಾದ್ದರಿಂದ ಪ್ರಕ್ರಿಯೆ ಪ್ರಾರಂಭಿಸಿರುವುದಿಲ್ಲ.

ಆ) 2002–03ರಲ್ಲಿ 15.00 ಲಕ್ಷ ರೂ.ಗಳು. 2003–04ರಲ್ಲಿ 10,00 ಲಕ್ಷ ರೂ.ಗಳು ಮೀಸಲಿರಿಸಲಾಗಿತ್ತು ಮತ್ತು 2004–05ರಲ್ಲಿ 5.00 ಲಕ್ಷರೂ.ಗಳು ಮೀಸಲಿರಿಸಲಾಗಿದೆ. ಆದರೆ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಇ) ಅಂದಾಜು ವೆಚ್ಚ 70.00 ಕೋಟಿ ರೂಗಳು ಮತ್ತು ಶೇಕಡ 13 ರಷ್ಟು ಕೇಂದ್ರ ಸರ್ಕಾರದಿಂದ ಶೇಕಡ13 ರಷ್ಟು ರಾಜ್ಯ ಸರ್ಕಾರದಿಂದ, ಇನ್ನುಳಿದ ಶೇಕಡ 74 ರಷ್ಟು ಖಾಸಗಿ ಸಹಭಾಗಿತ್ವದಿಂದ ಹಣ ಸಂಗ್ರಹಿಸಲಾಗುವುದು.

ಈ) ಹೌದು

ಉ) ಇಲಾಖೆಯು ಈಗಾಗಲೇ ಹೆಸರುಘಟ್ಟ ಹತ್ತಿರ ಜಮೀನನ್ನು ಗುರುತಿಸಿದೆ. ಈ ಜಮೀನು ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮಕ್ಕೆ ಸೇರಿರುವುದರಿಂದ ವಾರ್ತ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಗೆ 100 ಎಕರೆ ಜಮೀನನ್ನು ವರ್ಗಾಯಿಸುವಂತೆ ಕೋರಿ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಜಮೀನಿನ ಸ್ವಾಧೀನತೆ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಹೌದು ಸೊಸೈಟಿಯನ್ನು ಇನ್ನೂ ರಚಿಸಿರುವುದಿಲ್ಲ.